**O.S. 433-24 PW :1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 02.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ R G K, ವಕೀಲರಿಂದಃ**

8. ಸ ನಂಃ 174/1, ಮೂಲತಃ ಮೂಲಗಿ ಕುಟುಂಬದ್ದು. ಮೂಲಗಿ ಕುಟುಂಬದ್ದು ಅಂತಾ ತೋರಿಸಲು ಉತಾರ ಬಿಟ್ಟರೇ ಬೇರೆ ದಾಖಲೆ ಹಾಜರಪಡಿಸಿಲ್ಲ. ಸ ನಂಃ 174/1, 36 ಗುಂಟ ಮೂಲತಃ ಈರಪ್ಪ ಚನ್ನಪ್ಪ ಜವಳಿ ಎಂಬುವವರಿಗೆ ಸೇರಿದ್ದು, ಸದರಿ ಜಮೀನನ್ನು ಮೂಲತಗಿ ಕುಟುಂಬದವರು ಖರೀದಿ ಮಾಡಿದ್ದಾರೆ. ಸದರಿ ಜಮೀನು ಬಿನ್ ಶೇತ್ಕಿ ಆಯಿತು ಅಂದರೆ ಸರಿ. ಬಿನ್ ಶೇತ್ಕಿ ಆದ ನಂತರ ಪ್ಲಾಟ ಮಾಡಿದರು ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ಸ ನಂಃ 174/1,ರ 3 ಪಹಣಿ ಪತ್ರಿಕೆಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ 3 ಪಹಣಿ ಪತ್ರಿಕೆಗಳನ್ನು ನಿಡಿ.2 ರಿಂದ 4 ಎಂದು ಗುರುತಿಸಲಾಯಿತು. ಸ ನಂಃ 174/1 ರಲ್ಲಿ 1) ಗುರುಸಿದ್ದಪ್ಪ 2) ಶಿವಪ್ಪ ತಂದೆಃ ಈರಪ್ಪ ಮೂಲಗಿ ರವರ ಹೆಸರಿನಲ್ಲಿದೆ ಅಂದರೆ ಸರಿ. ಸದರಿ ಆಸ್ತಿಗಳಲ್ಲಿ ಪ್ಲಾಟ್ ಮಾಡಿದರು ಅಂದರೆ ಸರಿಯಲ್ಲ. ಸಾಕ್ಷಿಗೆ ದೃಢೀಕೃತ ಪ್ರೊಸಿಡಿಂಗ್ಸ ಬುಕ್ ತೋರಿಸಲಾಗಿ ಅದರಲ್ಲಿ ಸ ನಂಃ 174/1 ರಲ್ಲಿ ಹೆಸರು ನಮೂದಾಗಿರುವ ಬಗ್ಗೆ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು. ಹಾಗೂ 3 ಜನರ ಹೆಸರು ದಾಖಲಾದ ಬಗ್ಗೆ ದಾಖಲೆಯನ್ನು ನಿಡಿ.6 ಎಂದು ಗುರುತಿಸಲಾಯಿತು. ಸ ನಂಃ 174/1, ಬಿನ್ ಶೇತ್ಕಿ ಆಗಿ ಪ್ಲಾಟಗಳಾದ ನಂತರ ಅದಕ್ಕೆ ಪಂಚಾಯತಿಯಲ್ಲಿ 17 ನಂಬರ ಕೊಟ್ಟರು ಅಂದರೆ ಸರಿ. ಆಸ್ತಿ ನಂಃ 17 ವಾದ ನಂತರ ಖರೀದಿದಾರರ ಹೆಸರು ನಮೂದು ಆಯಿತು ಅಂದರೆ ಸಾಕ್ಷಿಯು ನೋಡಿ ಗೊತ್ತಿಲ್ಲವೆಂದು ಹೇಳುತ್ತಾರೆ. ದಾವಾ ಸಲ್ಲಿಸುವುದಗಿಂತ ಮುಂಚೆ ಆಸ್ತಿ ನಂಃ 17 ನ್ನು ನೋಡಿಲ್ಲ. ಆಸ್ತಿ ನಂಃ 17 ರಲ್ಲಿ ಮನೆ ಕಟ್ಟಿದ ಬಗ್ಗೆ ಗೊತ್ತಿಲ್ಲ. ಸ ನಂಃ 174/1, ಅಸ್ತಿತ್ವದಲ್ಲಿ ಇಲ್ಲ ಹಾಗೂ ಪ್ರತಿವಾದಿಗಳ ಕುಟುಂಬದಲ್ಲಿ ಇಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಒಂದು ಪ್ಲಾಟನ್ನು ಶಿವಪ್ಪ ಜವಳಿ ಎಂಬುವವರಿಗೆ ನನ್ನ ಗಂಡ ಖರೀದಿ ಪತ್ರ ಮಾಡಿಕೊಟ್ಟಿದ್ದಾನೆ ಅಂದರೆ ಸರಿಯಲ್ಲ. ನನ್ನ ಗಂಡ ವಬ್ಬಿ ಯಲ್ಲಿ ವೈದ್ಯಕೀಯ ವೃತ್ತಿ ಮಾಡುತ್ತಾರೆ ಅಂದರೆ ಸರಿ. ಅವರಿಗೆ ಒಳ್ಳೆಯ ಆದಾಯವಿದೆ ಅಂದರೆ ಸರಿ. ನನ್ನ ಗಂಡ ತನ್ನ ಸ್ವಂತ ಆದಾಯದಿಂದ ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪ್ಲಾಟ ನಂಃ 139, ಸ ನಂಃ 88 ರಲ್ಲಿ ರಾಯನಾಳ ದಲ್ಲಿ ಖರೀದಿ ಮಾಡಿದರು ಅಂದರೆ ಸರಿ. ನಾನು ಆ ಕಾಲಕ್ಕೆ ದುಡಿಯುತ್ತಿದ್ದೆ, ಇಬ್ಬರೂ ಕೂಡಿ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ.

**O.S. 433-24** **PW :1**

ನಾನು ಹಣ ಕೊಟ್ಟ ಬಗ್ಗೆ ದಾಖಲೆ ಇಲ್ಲ. ಸದರಿ ಖರೀದಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ.7 ಎಂದು ಗುರುತಿಸಲಾಯಿತು. ರಾಮಪ್ಪ ಸಿದ್ದಪ್ಪ ಮೂಲಗಿ ನನ್ನ ಗಂಡನ ದೊಡ್ಡಪ್ಪ ಅಂದರೆ ಸರಿ. ಸದರಿ ರಾಮಪ್ಪ ರವರು ಸ ನಂಃ 174/1, 35 ಗುಂಟೆ ಖರೀದಿ ಮಾಡಿದ ಖರೀದಿ ಪತ್ರ ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ಖರೀದಿ ಪತ್ರವನ್ನು ನಿಡಿ.8 ಎಂದು ಗುರುತಿಸಲಾಯಿತು. ರಾಯನಾಳದಲ್ಲಿ ಪ್ಲಾಟ ನ್ನು ಕಬ್ಜೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಅದು ನನ್ನ ಗಂಡನ ಕಬ್ಜಾದಲ್ಲಿದೆ.

9. ನನ್ನ ಗಂಡನ ತಂದೆ ಅಣ್ಣ - ತಮ್ಮಂದಿರು ಬಸಪ್ಪ, ರಾಮಪ್ಪ ಹಾಗೂ ಭರಮಪ್ಪ. ಭರಮಪ್ಪ ಮದುವೆಯಾಗಲಿಲ್ಲ. ಬಸಪ್ಪ ಹಾಗೂ ಬಸವಣ್ಣೆಪ್ಪ ನನ್ನ ಗಂಡನ ತಂದೆ. ಬಸವಣ್ಣೆಪ್ಪ ಹಾಗೂ ರಾಮಪ್ಪ ಅವರ ಜೀವಿತ ಕಾಲದಲ್ಲಿ ಆಸ್ತಿ ಹಂಚಿಕೆ ಮಾಡಿಕೊಂಡರು ಅಂದರೆ ಸರಿ. ಬೇರೆಯಾದ ನಂತರ ಅವರವರ ಆಸ್ತಿಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದರು ಅಂದರೆ ಸರಿಯಲ್ಲ. ಬೇರೆಯಾದರೂ ಕೂಡಾ ಕೂಡಿ ಸಾಗುವಳಿ ಮಾಡುತ್ತಿದ್ದರು. ಸಾಕ್ಷಿಗೆ ಒಂದು ಮುಟೇಶನ್ ನಂಃ 1861 ನ್ನು ತೋರಿಸಲಾಗಿ ಆ ಪ್ರಕಾರ ಬೇರೆಯಾದರು ಅಂದರೆ ಗೊತ್ತಿಲ್ಲವೆಂದು ಹೇಳುತ್ತಾರೆ. ಸ ನಂಃ 33/2 ಬ, ಮೊದಲು ನನ್ನ ಗಂಡ ಹಾಗೂ ಆತನ ಸಹೋದರರಹೆಸರಿನಲ್ಲಿತ್ತು ಅಂದರೆ ಸರಿ. ಸದರಿ ಎರಡು ಪಹಣಿ ಪತ್ರಿಕೆಗಳನ್ನು ನೋಡಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅವುಗಳನ್ನು ನಿಡಿ.9 ಎಂದು ಗುರುತಿಸಲಾಯಿತು. ನನ್ನ ಗಂಡನ ಅಣ್ಣ ಅಪಘಾತ ದಲ್ಲಿ ಮರಣ ಹೊಂದಿದ್ದಾರೆ ಅಂದರೆ ಸರಿ. ಸನಂಃ 33 ಎ, ನನ್ನ ಗಂಡನ ಅಣ್ಣ ಅಪಘಾತ ವಾದ ನಂತರ ಆತನ ಮಕ್ಕಳ ಹೆಸರಿನಲ್ಲಿ ಆಯಿತು ಅಂದರೆಸರಿ. ಸ ನಂಃ 33 ಎ, 3 ಜನರ ಹೆಸರಿನಲ್ಲಿದೆ ಎಂದು ಸಾಕ್ಷಿಯೂ ಪಹಣಿ ಪತ್ರಿಕೆಪಿ ನೋಡಿ ಒಪ್ಪಿಕೊಗಂಡಿದ್ದರಿಂದ ಸದರಿ ಪಹಣಿ ಪತ್ರಿಕೆಯನ್ನು ನಿಡಿ.10 ಎಂದು ಗುರುತಿಸಲಾಯಿತು. ಸ ನಂಃ 33 ಒಟ್ಟು ಕ್ಷೇತ್ರ ಎಷ್ಟು ಇದೆ ಅಂದರೆ ಗೊತ್ತಿಲ್ಲ. ಸ ನಂಃ 33/2, ನನ್ನ ಗಂಡ ದೊಡ್ಡಪ್ಪ ರಾಮಪ್ಪ ಖರೀದಿ ಮಾಡಿದ್ದಾರೆ ಅಂದರೆ ಸಾಕ್ಷಿ ನೋಡಿ ಗೊತ್ತಿಲ್ಲವೆಂದು ಹೇಳುತ್ತಾರೆ. ಇನ್ನು 3 ಎಕರೆ ಯನ್ನು ರಾಮಪ್ಪ ರವರು ಖರೀದಿ ಮಾಡಿದ್ದಾರೆ ಎಂದು, ಖರೀದಿ ಪತ್ರ ತೋರಿಸಲು ಅದನ್ನು ಗೊತ್ತಿಲ್ಲವೆಂದು ಹೇಳುತ್ತಾರೆ. ನನ್ನ ಗಂಡನ ಅಣ್ಣ ಹನಮಂತಪ್ಪ ಮರಣ ಹೊಂದಿದ ನಂತರ ವಾಟ್ನಿ ಪತ್ರವನ್ನು ಮಾಡಿಕೊಂಡಿದ್ದರಿಂದ ವಾಟ್ನಿ ಪತ್ರ ತೋರಿಸಲಾಗಿ ಅದು ಸುಳ್ಳು ಎಂದು ಹೇಳುತ್ತಾರೆ. ವಾಟ್ನಿ ಪತ್ರದ ಪ್ರಕಾರ ಅವರವರ ಹೆಸರು ದಾಖಲಾಯಿತು ಅಂದರೆ ಸರಿ. ಸದರಿ ವಾಟ್ನಿ ಪ್ರತ್ರವನ್ನು ಪ್ರಶ್ನೆ ಮಾಡುವ ಅಧಿಕಾರ ಇಲ್ಲ ಅಂದರೆ ಸರಿಯಲ್ಲ.

**O.S. 433-24** **PW :1**

ಈಗ ಸಾಕ್ಷಿಗೆ ಮುಟೇಶನ್ ನಃ ಹೆಚ್ - 26 ನ್ನು ತೋರಿಸಲಾಗಿ ಸಾಕ್ಷಿಯೂ ಅದನ್ನು ಆ ತರಹ ದಾಖಲಾಗಿದೆ ಅಂತಾ ಒಪ್ಪಿಕೊಂಡಿದ್ದರಿಂದ ಸದರಿ ಮುಟೇಶನ್ ನ್ನು ನಿಡಿ.11 ಎಂದು ಗುರುತಿಸಲಾಯಿತು. ಮೊದಲು ಆಸ್ತಿಗಳು ಪ್ರತಿವಾದಿಗಳ ತಂದೆ ಹಾಗೂ ಸೋದರರ ನಡುವೆ ವಾಟ್ನಿವಾದವು ಅಂದರೆ ಸರಿ. ನನ್ನ ಗಂಡನ ತಂದೆ ಮರಣ ಹೊಂದಿದ ನಂತರ ನನ್ನ ಗಂಡ ಹಾಗೂ ಅವರ ಅಣ್ಣ ತಮ್ಮಂದಿರು ಕಾನೂನುಬದ್ಧವಾಗಿ ವಾಟ್ನಿಮಾಡಿಕೊಂಡಿದ್ದರು ಅಂದರೆ ಸರಿ. ಬಸವಣ್ಣೆಪ್ಪ ಹಾಗೂ ರಾಮಪ್ಪ ರವರು ವಾಟ್ನಿ ಮಾಡಿಕೊಂಡಿದ್ದಂದ ಅವರ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ಅದೇ ರೀತಿ ನನ್ನ ಗಂಡ ಹಾಗೂ ಅವರ ಅಣ್ಣ - ತಮ್ಮಂದಿರು ವಾಟ್ನಿ ಮಾಡಿಕೊಂಡಿದ್ದರಿಂದ ಸದರಿ ಆಸ್ತಿಗಳು ಅವರ ಸರ್ಯಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ಹುಬ್ಬಳ್ಳಿಯಲ್ಲಿ ಚಿನ್ಮಯ ಕ್ಲಿನಿಕ್ ನ್ನು ಪ್ರಾರಂಭ ಮಾಡಿದ ನಂತರ ನಾನು ಮಂಜಯ್ಯ ತಂದೆಃ ಶಿವಯ್ಯ ಹಿರೇಮಠ ಸಾಃ ಇನಾಮಕೊಪ್ಪ ಇವರ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದರಿಂದ ಪ್ರತಿವಾದಿಗಳ ಕುಟುಂಬದಲ್ಲಿ ಜಗಳ ಪ್ರಾರಂಭವಾಯಿತು ಅಂದರೆ ಸರಿಯಲ್ಲ. ಆ ಕಾರಣದಿಂದ ಅವರು ವಾಟ್ನಿ ಮಾಡಿಕೊಂಡರು ಅಂದರೆ ಸರಿಯಲ್ಲ. ವಾಟ್ನಿ ಮಾಡಿಕೊಂಡ ಪ್ರಕಾರ ಅವರವರ ಆಸ್ತಿಗಳನ್ನು ಅನುಭೋಗ ಮಾಡಿಕೊಂಡು ಬೇರೆ ಇರುತ್ತಾರೆ ಅಂದರೆ ಸರಿಯಲ್ಲ. ನನ್ನ ಗಂಡನ ವ್ಯಾಸಂಗಕ್ಕೆ ಹಣ ಖರ್ಚು ಮಾಡಿದ್ದರಿಂದ ಗಂಡನಿಗೆ 7 ಎಕರೆ ಜಮೀನು ಮಾತ್ರ ಕೊಟ್ಟರು ಅಂದರೆ ಸರಿಯಲ್ಲ. ಸಾಲವನ್ನು ಯಂಕಪ್ಪ ಹಾಗೂ ಹನಮಂತಪ್ಪ ತಿರುವಳಿ ಮಾಡಬೇಕೆಂದು ಕರಾರುವಾಯಿತು ಅಂದರೆ ಸರಿಯಲ್ಲ. ಶಾಂತಾದೇವಿ ದೇವರಾಜಗೌಡ ಪಾಟೀಲ ರವರು ನನ್ನ ಗಂಡನ ಅಕ್ಕ. ಶಾಂತಾದೇವಿ ರವರು ನೂಲ್ವಿಯಲ್ಲಿರುತ್ತಾರೆ. ಶಾಂತಾದೇವಿ ರವರು ಜೀವಂತ ಇರುವ ವಿಷಯ ಗೊತ್ತು. ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ನನ್ನ ಗಂಡ 2008 ರಿಂದ ವೈದ್ಯಕೀಯ ವೃತ್ತಿ ಮಾಡುತ್ತಾರೆ ಅಂದರೆ ಸರಿ. 2001-02 ರಿಂದ ಮಾಡುತ್ತಾರೆಂದು ಹೇಳುತ್ತಾರೆ. ರಾಯನಾಳದಲ್ಲಿರುವ ಪ್ಲಾಟ ನನ್ನ ಗಂಡನ ಸ್ವಂತ ಆಸ್ತಿ ಅಂದರೆ ಸರಿಯಲ್ಲ. ಸ ನಂಃ 174/1 ರಲ್ಲಿ ಬೇರೆ ಬೇರೆಯವರು ಮನೆ ಕಟ್ಟಿದ ವಿಷಯ ಗೊತ್ತು, ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿ 9999, ಎರಡು ಪ್ಲಾಟುಗಳು ನನ್ನ ಗಂಡನ ಕುಟುಂಬದಲ್ಲಿ ಇಲ್ಲ ಅಂದರೆ ಸರಿಯಲ್ಲ. ನನ್ನ ಗಂಡನದು ಜಂಟಿ ಕುಟುಂಬ ಇಲ್ಲ ಅಂದರೆ ಸರಿಯಲ್ಲ.

**O.S. 433-24** **PW :1**

**ಮುಂದಿನ ಪಾಟೀ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.